# ಮಹಿಳೆಯರು ಆಹಾರ ಉದ್ದಿಮೆದಾರರಾಗಲು ವಿಶೇಷ ಅಭಿಯಾನ

## ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME)

| ಮಹಿಳೆಯರ ಆರ್ಥಿಕ ಸ್ವಾವಲಂಬನೆ ಇಂದಿನ ಅವಶ್ಯಕತೆ |
|---|
| ಮಹಿಳೆಯರು ಕೃಷಿ ಮತ್ತು ಗ್ರಾಮೀಣ ಬದುಕಿನ ಬೆನ್ನೆಲುಬು |
| ಗ್ರಾಮೀಣ ಆರ್ಥಿಕತೆ ವೃದ್ಧಿಸಲು ಮಹಿಳೆಯರ ಪಾತ್ರ ದೊಡ್ಡದು |
| ಸಾಂಪ್ರದಾಯಿಕ ಪಾಕವಿಧಾನದಲ್ಲಿ ಮಹಿಳೆಯರದೇ ಮೇಲುಗೈ |
| ಸ್ಥಳೀಯವಾಗಿ ಬೆಳೆದ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಲ್ಲಿಯೂ ಇವರ ಪಾತ್ರ |
| ನೆರೆ-ಹೊರೆಯ ಮಹಿಳೆಯರಿಗೆ ಉದ್ಯೋಗ ನೀಡುವ ಶಕ್ತಿ |
| ಆಹಾರ ಮತ್ತು ಪೌಷ್ಠಿಕಾಂಶ ಭದ್ರತೆ ಒದಗಿಸುವಲ್ಲಿ ಗಮನಾರ್ಹ ಕೊಡುಗೆ |

### ಯೋಜನೆಯಡಿಯಲ್ಲಿ ಸ್ಥಾಪಿಸಬಹುದಾದ ಕಿರು ಆಹಾರ ಉದ್ದಿಮೆಗಳು:

ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಚಟ್ನಿ ಪುಡಿಗಳು, ಬೇಕರಿ ಉತ್ಪನ್ನಗಳು, ರೊಟ್ಟಿ, ಮಾಲ್ಟ್, ಹುರಿಹಿಟ್ಟು, ತ್ವರಿತ ಮಿಶ್ರಣಗಳು (instant mixes), ಮಸಾಲೆ - ಸಾಂಬಾರ ಪದಾರ್ಥಗಳು, ಇಡ್ಲಿ - ದೋಸೆ ಹಿಟ್ಟು, ಹಣ್ಣಿನ ಜಾಮ್- ಜೆಲ್ಲಿ ಮತ್ತು ಪಾನೀಯಗಳು, ಹಾಲಿನ ಉತ್ಪನ್ನಗಳಾದ ಬೆಣ್ಣೆ, ತುಪ್ಪ, ಪನ್ನೀರ್, ಚೀಸ್, ಜೇನುತುಪ್ಪ ಉತ್ಪನ್ನಗಳು, ಸಿರಿಧಾನ್ಯ ಆಧಾರಿತ ಉತ್ಪನ್ನಗಳು, ಎಣ್ಣೆ ಬೀಜ ಆಧಾರಿತ ಉತ್ಪನ್ನಗಳು, ಬೇಕರಿ ಉತ್ಪನ್ನಗಳು, ಬೆಲ್ಲ ಆಧಾರಿತ ಉತ್ಪನ್ನಗಳು, ಮೆಣಸಿನಕಾಯಿ ಆಧಾರಿತ ಉತ್ಪನ್ನಗಳು ಅಥವಾ ಇನ್ನಾವುದೇ ಸಂಸ್ಕರಿಸಿದ ಆಹಾರ ಉತ್ಪನ್ನಗಳನ್ನು ಸ್ಥಾಪಿಸಲು ಅವಕಾಶವಿದೆ.

### ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಸ್ಥಾಪನೆ / ಅಭಿವೃದ್ಧಿಗೆ PMFME ಯೋಜನೆಯು ಮಹಿಳೆಯರಿಗೆ ಸುವರ್ಣಾವಕಾಶ ಕಲ್ಪಿಸುತ್ತದೆ

ಯೋಜನೆಯಡಿಯಲ್ಲಿ ಕಿರು ಆಹಾರ ಉದ್ದಿಮೆ ಸ್ಥಾಪಿಸಲು ಶೇ.50 ರಷ್ಟು ಅಥವಾ ಗರಿಷ್ಠ ರೂ.15.00 ಲಕ್ಷ ಸಾಲ ಸಂಪರ್ಕಿತ ಸಹಾಯಧನ (ಕೇಂದ್ರ ಸರ್ಕಾರದ ರೂ.6.00 ಲಕ್ಷ ಹಾಗೂ ರಾಜ್ಯ ಸರ್ಕಾರದ ರೂ.9.00 ಲಕ್ಷ ಸಹಾಯಧನ ಲಭ್ಯವಿರುತ್ತದೆ).

ಹೊಸದಾಗಿ ಆಹಾರ ಉದ್ದಿಮೆ ಸ್ಥಾಪಿಸಲು ಆಸಕ್ತಿಯುಳ್ಳವರು ಅಥವಾ ಈಗಾಗಲೇ ಆಹಾರ ಉದ್ದಿಮೆಯಲ್ಲಿ ತೊಡಗಿಸಿಕೊಂಡಿರುವವರು ಅದನ್ನು ಮೇಲ್ದರ್ಜೆಗೇರಿಸಲು ಈ ಯೋಜನೆ ಅವಕಾಶ ಕಲ್ಪಿಸುತ್ತದೆ.

| ವಿಶೇಷ ಅಭಿಯಾನದ ಭಾಗವಾಗಿ ಕೆಪೆಕ್ ಸಂಸ್ಥೆಯಲ್ಲಿ ಕಲ್ಪಿಸಿರುವ ವ್ಯವಸ್ಥೆಗಳು |
|---|
| ಮಹಿಳಾ ಸಹಾಯವಾಣಿ ಕೇಂದ್ರ |
| ಬ್ಯಾಂಕಿಂಗ್ ಸಲಹಾ ಕೋಶ |
| ಅರ್ಜಿ ಸಲ್ಲಿಕೆ ಮತ್ತು ವಿಲೇವಾರಿಗೆ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳ ಲಭ್ಯತೆ |
| ಅರ್ಜಿ ಸಲ್ಲಿಸಿದ ದಿನದಂದೇ ಅರ್ಜಿಯ ಪರಿಶೀಲನೆ ಹಾಗೂ ಸಹಾಯಧನಕ್ಕೆ ಶಿಫಾರಸ್ಸು |

### ಆಸಕ್ತ ಮಹಿಳೆಯರು ಕೆಪೆಕ್ ಕಚೇರಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ಭೇಟಿ ನೀಡುವುದು:

ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ರೇಷನ್ ಕಾರ್ಡ್/ ವಿದ್ಯುತ್ ಬಿಲ್, ಉದ್ದಿಮೆದಾರರ ಫೋಟೋಗಳು, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ - ಕಳೆದ 6 ತಿಂಗಳು, ಯಂತ್ರೋಪಕರಣಗಳ ವಿವರಗಳು ಮತ್ತು ಕೊಟೇಷನ್, ಬಾಡಿಗೆ/ಲೀಸ್ ಕರಾರಪತ್ರ, ಸ್ಥಾಪಿಸಬೇಕಿರುವ ಉದ್ದಿಮೆಯ ವಿವರಗಳು













ಹೆಚ್ಚಿನ ಮಾಹಿತಿಗಾಗಿ ವಿಶೇಷ ಮಹಿಳಾ ಸಹಾಯವಾಣಿಯ ಸಲಹೆಗಾರರು / ಕೆಪೆಕ್ ಸಿಬ್ಬಂದಿಯನ್ನು ಸಂಪರ್ಕಿಸಿ:

**: 76187 86813 / 14 / 15 / 16 / 17 / 18**

Email: pmfmekarnataka@gmail.com Website: https://kappec.karnataka.gov.in/

ಕೆಪೆಕ್ ಕೇಂದ್ರ ಕಚೇರಿಗೆ ಬರಲು ಸಾಧ್ಯವಾಗದವರು ಸಂಬಂಧಪಟ್ಟ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೂ ಸಹ ಭೇಟಿ ನೀಡಿ ಈ ವಿಶೇಷ ಅಭಿಯಾನದ ಪ್ರಯೋಜನ ಪಡೆದುಕೊಳ್ಳಬಹುದು

**ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಒಂದು ಉದ್ಯಮ) ಹಾಗೂ ರಾಜ್ಯ ನೋಡಲ್ ಏಜೆನ್ಸಿ- PMFME ನಂ.17, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ (ರಿಚ್ಮಂಡ್ ರಸ್ತೆ), ಬೆಂಗಳೂರು-560 025